**ಕರ್ನಾಟಕ ಸರ್ಕಾರ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪ ನಿರ್ದೇಶಕರವರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ.

**ಮೈಲೂರ ರಸ್ತೆ, ಬೀದರ, ☎: 08482-233146, 08482-234237**

Email: adwcdbidar@gmail.com


**ಸಂಖ್ಯೆ:**ಉನಿಬೀ/ಮಮಅಇ/ಮಿಶ/ಜಿಮಸಘ/2023-24 4028 **ದಿನಾಂಕ:**09.02.2024

# ನೇಮಕಾತಿ ಪ್ರಕಟಣೆ

**ವಿಷಯ:** "ಮಿಷನ್ ಶಕ್ತಿ" ಯೋಜನೆಯಡಿಜಿಲ್ಲಾ ಮಹಿಳಾ ಸಬಲೀಕರಣಘಟಕದಲ್ಲಿ(District Hub for Empowerment of Women) ಹೊಸದಾಗಿ ಸೃಜಿಸಲಾದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** 1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ರವರ ಪತ್ರ ದಿನಾಂಕ:11.01.2024

2. ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಇವರ ಕಡತ ಅನುಮೋದನೆ ಕಂಡಿಕೆ ಸಂಖ್ಯೆ:02 ದಿನಾಂಕ:.07.02.2024.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಮೂಲಕ ಪ್ರಕಟಿಸುವುದೇನೆಂದರೆ, ಬೀದರ ಜಿಲ್ಲೆಯಲ್ಲಿ"ಮಿಷನ್ ಶಕ್ತಿ" ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸ್ಥಾಪಿಸಲಾದ ಉಪ ಯೋಜನೆಯ ಜಿಲ್ಲಾ ಮಹಿಳಾ ಸಬಲೀಕರಣ ಘಟಕದಲ್ಲಿ ಕಾರ್ಯನಿರ್ವಹಿಸಲು 1. District Mission Coordinator-1, 2.Specialist in Financial Literacy & Accountant-1, ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಈ ಕೆಳಕಾಣಿಸಿದ ತಖ್ತೆಯಲ್ಲಿ ತಿಳಿಸಿರುವಂತೆ ಈ ಹಿಂದೆ ಉತ್ತಮ ಕಾರ್ಯ ನಿರ್ವಹಿಸಿರುವ ಬಗ್ಗೆ ದಾಖಲೆ ಹೊಂದಿರುವ ಹಾಗೂ ಕನಿಷ್ಠ ಉಸ್ತುವಾರಿಯಲ್ಲಿ ಉತ್ತಮ ಕೆಲಸ ನಿರ್ವಹಿಸಬಲ್ಲ, ತರಬೇತಿಗಳನ್ನು ಹಮ್ಮಿಕೊಳ್ಳಲು ಸಾಮರ್ಥ್ಯ/ಕೌಶಲ್ಯ ಹೊಂದಿರುವ, ಗಣಕಯಂತ್ರ ನಿರ್ವಹಣೆಯಲ್ಲಿ ಪರಿಣಿತಿ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಪೂರ್ಣ ಹಿಡಿತವುಳ್ಳ ಅಭ್ಯರ್ಥಿಗಳನ್ನು ನೇರವಾಗಿ ಸಂದರ್ಶನಕ್ಕೆ ಆಹ್ವಾನಿಸಿ ಸಂದರ್ಶನ/ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು/ಅನುಭವ/ಕಂಪ್ಯೂಟರ್ ಪರೀಕ್ಷೆಗಳ ಮೂಲಕ ನೇಮಕಾತಿಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

**ಹುದ್ದೆಯ ವಿವರ ಹಾಗೂ ಅರ್ಹತೆಗಳು :**

| Name of the Post | Qualification | No of Post Position |
|---|---|---|
| **District Mission Coordinator** | • **Graduate in Social Sciences/Life Sciences /Nutrition/Medicine /Health Management /Social Work /Rural Management**<br><br>**Experience: 3 Year's Working with the Government /non-Government Organizations in related domain.** | 01 |
| **Specialist in financial Literacy & Accountant** | • **Graduate in Economics/Banking /other disciplines. Post-graduate will be preferred.**<br><br>**Experience: 3 years working with the Government /Non-Government organization in financial literacy/financial inclusion focused themes..** | 01 |

**ವಿಶೇಷ ಸೂಚನೆಗಳು :**

1. ಸದರಿಹುದ್ದೆಗಳ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, 11 ತಿಂಗಳಿಗೆ ಗುತ್ತಿಗೆ/ಗೌರವ ಸೇವೆಯಆಧಾರದ ಮೇಲೆ ಸೇವೆ ಆಗಿರುತ್ತದೆ. ಸಿಬ್ಬಂದಿಯ ಕಾರ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ, ಮುಂದಿನ ಅವಧಿಗೆ ಸೇವೆ ಮುಂದುವರೆಸುವ ಬಗ್ಗೆ ಸೂಕ್ತವಾಗಿ ನಿರ್ಧರಿಸಲಾಗುವುದು.
2. ಸರ್ಕಾರ ನಿಗದಿಪಡಿಸುವ ಮಾಸಿಕ ಸಂಚಿತ ಸಂಭಾವನೆ ಮಾತ್ರ ಪಾವತಿಸಲಾಗುವುದು ಮತ್ತು ಸರ್ಕಾರದ ಇತರೇ ಯಾವುದೇ ಭತ್ಯೆಗಳಿಗೆ ಹಾಗೂ ಸರ್ಕಾರದ ಇತರೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
3. ಅಭ್ಯರ್ಥಿ ಹುದ್ದೆಗೆ ಅನುಗುಣವಾಗಿ ಅಂಗೀಕೃತ ಕಾಲೇಜು/ವಿಶ್ವ ವಿದ್ಯಾಲಯಗಳಿಂದ ಶಿಕ್ಷಣ ಪಡೆದಿರಬೇಕು. ಹಾಗೂ ನಿಗದಿಪಡಿಸಿದ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು.
4. ಕಂಪ್ಯೂಟರ್ ಜ್ಞಾನದ ಬಗ್ಗೆ ಖಾತ್ರಿ ಪಡಿಸಿಕೊಂಡು ಕೌಶಲ್ಯ ಪರೀಕ್ಷೆ ನಡೆಸಿ ಸಂದರ್ಶನ ಮೂಲಕ ಆಯ್ಕೆ ಮಾಡಲಾಗುವುದು.
5. ಸದರಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕನ್ನಡ ಮತ್ತು ಇಂಗ್ಲೀಷ್ ಜ್ಞಾನ ಅಗತ್ಯವಾಗಿರುತ್ತದೆ.
6. ಸದರಿ ನೇಮಕಾತಿಯನ್ನು ಸರ್ಕಾರದ ನಿರ್ದೇಶನ ಹಾಗೂ ಆದೇಶದಂತೆ ರದ್ದುಪಡಿಸುವ ಅಥವಾ ಅವಧಿಕ್ಕಿಂತ ಕಡಿಮೆ ಮಾಡುವ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷರು ಹೊಂದಿರುತ್ತಾರೆ.
7. ಅಭ್ಯರ್ಥಿಯ ಆಯ್ಕೆ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
8. ತಾತ್ಕಾಲಿಕ ಹುದ್ದೆ ಇರುವುದರಿಂದ ಯಾವುದೇ ಮೀಸಲಾತಿಗಳು ಅನ್ವಯಿಸುವುದಿಲ್ಲ.
9. ಸದರಿ ಮೇಲಿನ ಹುದ್ದೆ ಕ್ಷೇತ್ರ ಮಟ್ಟ(Field work) ಆಗಿರುತ್ತದೆ.

**ಸಲ್ಲಿಸಬೇಕಾದ ದಾಖಲೆಗಳು:**

1. ನಿಗದಿತ ನಮೂನೆಯಲ್ಲಿ ಅರ್ಜಿ
2. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
3. ಹುದ್ದೆಗೆ ನಿಗದಿಪಡಿಸಿದ ಹಾಗೂ ವಿದ್ಯಾರ್ಹತೆಯ ಅಂಕಪಟ್ಟಿಗಳು.
4. ಅನುಭವ ಪ್ರಮಾಣ ಪತ್ರಗಳು.
5. ಕನಿಷ್ಠ 06 ತಿಂಗಳು ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ.

ಈ ಮೇಲಿನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿ ಅಥವಾ ಬೀದರ ಜಿಲ್ಲಾ ಎನ್.ಐ.ಸಿ. ವೆಬ್‌ಸೈಟ್: https://bidar.nic.in ನಲ್ಲಿ ಪಡೆದು **ದಿನಾಂಕ:05/03/2024**ರ ವರೆಗೆಅಗತ್ಯ ದಾಖಲಾತಿಗಳೊಂದಿಗೆ ಈ ಕಛೇರಿಗೆ ಕಛೇರಿ ಸಮಯದಲ್ಲಿ **ಸಂಜೆ:05:30**ರ ಒಳಗೆ ಅರ್ಜಿಯನ್ನು ಸಲ್ಲಿಸಲು ಸೂಚಿಸಿದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಲೂರ ರೋಡ್, ಬೀದರ ಫೋನ್ ಸಂಖ್ಯೆ **08482-233146, 9591914358** ಸಂಪರ್ಕಿಸಬಹುದಾಗಿರುತ್ತದೆಂದು ಈ ಮೂಲಕ ಪ್ರಕಟಣೆ ಹೊರಡಿಸಿದೆ.

**ಉಪ ನಿರ್ದೇಶಕರು**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೀದರ

**ಪ್ರತಿಯನ್ನು :**

1. ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ
2. ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ರವರ ಮಾಹಿತಿಗಾಗಿ
3. ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೀದರ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಅನುಮತಿ ನೀಡಲು ಕೋರಿದೆ.
4. ಜಿಲ್ಲಾ ಇನ್‌ಫೋರ್ಮೆಟಿಕ್ಸ ಅಧಿಕಾರಿಗಳು, ಎನ್.ಐ.ಸಿ ಕೇಂದ್ರ ಬೀದರ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
5. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೀದರ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಉಚಿತವಾಗಿ ದಿನಪತ್ರಿಕೆಗಳಲ್ಲಿ ಜಾಹೀರಾತುಗೊಳಿಸಲು ಕೋರಿದೆ.
6. ಕಡತದ ಪ್ರತಿ.

# ಅರ್ಜಿ ನಮೂನೆ

## "ಮಿಷನ್ ಶಕ್ತಿ" ಯೋಜನೆಯಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕದ (District Hub forEmpowerment ofWomen) ಹುದ್ದೆಗಳ ಅರ್ಜಿ

ಇತ್ತಿಚೀನ ಪಾಸ್‌ಪೋರ್ಟ ಅಳತೆಯ ಭಾವಚಿತ್ರ

ಅರ್ಜಿ ಸಲ್ಲಿಸುವ ಹುದ್ದೆಯ ಹೆಸರು :

ಜಿಲ್ಲೆಯ ಹೆಸರು : ಬೀದರ

| | | |
|---|---|---|
| 01 | ಅಭ್ಯರ್ಥಿಯ ಹೆಸರು | |
| 02 | ತಂದೆಯ ಹೆಸರು | |
| 03 | ತಾಯಿಯ ಹೆಸರು | |
| 04 | ವಿಳಾಸ,ಮೊಬೈಲ್ ಸಂಖ್ಯೆ ಮತ್ತು ಈ-ಮೇಲ್ | <br>ಈ-ಮೇಲ್:<br>ಮೊಬೈಲ್<br>ಜಿ   ಪಿನ್ ಕೋಡ್ |
| 05 | ಜನ್ಮ ದಿನಾಂಕ (ದಿನಾಂಕ/ತಿಂಗಳು/ವರ್ಷ) | / / |
| 06 | ವೈವಾಹಿಕ ಸ್ಥಿತಿ(ವಿವಾಹಿತ/ಅವಿವಾಹಿತ/ವಿಧವೆ) | |
| 07 | ರಾಷ್ಟ್ರೀಯತೆ | |
| 08 | ಜಾತಿ-ಉಪಜಾತಿ-ವರ್ಗ | |
| 09 | ಲಿಂಗ (ಗಂಡು/ಹೆಣ್ಣು/ಇತರೆ) | |
| 10 | ವಿದ್ಯಾರ್ಹತೆ | |

2ನೇ ಪುಟಕ್ಕೆ

| ಕ್ರ.ಸಂ | ಸ್ನಾತಕೋತ್ತರ/ ಪದವಿಯ ಹೆಸರು | ವಿಶ್ವ ವಿದ್ಯಾಲಯ | ಉತ್ತೀರ್ಣರಾದ ವರ್ಷ | ಗರಿಷ್ಠ ಅಂಕಗಳು | ಪಡೆದ ಅಂಕಗಳು | ಶೇಕಡಾ ಅಂಕಗಳು |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

| | | |
|---|---|---|
| 11 | ಕಂಪ್ಯೂಟರ್‌ಜ್ಞಾನ (ಪ್ರಮಾಣ ಪತ್ರ ಲಗತ್ತಿಸುವುದು) | |

| | | | | | |
|---|---|---|---|---|---|
| 12 | ಈ ಹಿಂದೆ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ವಿವರ | ಪದನಾಮ | ಯಿಂದ | ವರೆಗೆ | ಸೇವೆ ಸಲ್ಲಿಸಿದ ವಿವರ (ವರ್ಷ/ತಿಂಗಳಲ್ಲಿ) |
| | | | | | |
| | | | | | |
| | | | | | |
| | | ಒಟ್ಟು | | | |

| | | |
|---|---|---|
| 13 | ಈ ಅರ್ಜಿಯೊಂದಿಗೆ ಲಗತ್ತಿಸಬೇಕಾದ ಸ್ವಯಂದೃಢೀಕೃತ ದಾಖಲಾತಿಗಳು | |
| | 1. ಎಸ್.ಎಸ್.ಎಲ್.ಸಿ.ಅಂಕಪಟ್ಟಿ | |
| | 2. ಸ್ನಾತಕೋತ್ತರ/ಪದವಿಯಎಲ್ಲಾ ಸೆಮಿಸ್ಟರ್/ವರ್ಷದ ಅಂಕಪಟ್ಟಿಗಳು | |
| | 3. ಕಂಪ್ಯೂಟರ್‌ಕೋರ್ಸ್‌ನ ಪ್ರಮಾಣ ಪತ್ರ | |
| | 4. ಅನುಭವದ ಪ್ರಮಾಣಪತ್ರ | |
| | 5. ವಿಶೇಷ ಅರ್ಹತೆಗೆ ಸಂಬಂಧ ಪಟ್ಟ ದಾಖಲೆಗಳು | |

## ದೃಢೀಕರಣ:

ಈ ಅರ್ಜಿಯಲ್ಲಿ ನಾನು ನೀಡಿರುವ ಎಲ್ಲಾ ಮಾಹಿತಿಗಳು ನನ್ನ ಜ್ಞಾನ ಮತ್ತು ಗ್ರಹಿಕೆಯ ಮಟ್ಟಿಗೆ ಸತ್ಯ, ಸಂಪೂರ್ಣ ಮತ್ತು ಸರಿಯಾದವುಗಳೆಂದು ಆಯ್ಕೆಗೆ ಮೊದಲು ಅಥವಾ ನಂತರ ನಾನು ನೀಡಿರುವ ಮಾಹಿತಿಯು ತಪ್ಪು ಎಂದು ಅಥವಾ ನಾನು ಅನರ್ಹ ಎಂದು ಕಂಡು ಬಂದರೆ ನನ್ನ ಅರ್ಜಿಯನ್ನು ತಿರಸ್ಕರಿಸಲು ಹಾಗೂ ನನ್ನ ವಿರುದ್ಧ ಕ್ರಮ ಜರುಗಿಸಬಹುದಾಗಿರುತ್ತದೆಂದು ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ:

ಸ್ಥಳ :

ಅಭ್ಯರ್ಥಿಯ ಸಹಿ